ಸಂದರ್ಶನ: ಪದ್ಮನಾಭ ಭಟ್

ಚಿತ್ರಗಳು: ಎಂ.ಎಸ್. ಮಂಜುನಾಥ್

# ಪ್ರಾಥಮಿಕ ಶಿಕ್ಷಣದ ಗುಣಮಟ್ಟವೇ ಸಂಶೋಧನೆಯ ಮೂಲಬೇರು

ಕೇಂದ್ರ ಸರ್ಕಾರ ಯುವ ವಿದ್ವಾಂಸರಿಗೆ ಕೊಡುವ 'ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್' ಪುರಸ್ಕಾರಕ್ಕೆ ಈ ವರ್ಷ ಭಾಜನರಾಗಿರುವ ಮೂವರಲ್ಲಿ ಬೆಂಗಳೂರಿನ ಎಸ್. ಕಾರ್ತಿಕ್ ಕೂಡ ಒಬ್ಬರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಕಾರ್ತಿಕ್, ಸಂಶೋಧನಾ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವವರು. ವ್ಯಾಕರಣ, ಛಂದಸ್ಸು, ಅಲಂಕಾರ, ನಿಘಂಟು, ನಾಣ್ಯಶಾಸ್ತ್ರ, ಜ್ಯೋತಿಷ್ಯ, ಸಂಗೀತ, ಶಾಸನಶಾಸ್ತ್ರ, ಪುರಾತತ್ವ, ಹಸ್ತಪ್ರತಿ ಶಾಸ್ತ್ರ, ಭಾಷಾಶಾಸ್ತ್ರ, ಭಾರತೀಯ ಕಾಲಗಣನೆ– ಹೀಗೆ ಅವರ ಆಸಕ್ತಿ ಹಲವು ಕ್ಷೇತ್ರಗಳಿಗೆ ಹಬ್ಬಿಕೊಂಡಿದೆ. 'ಪದಾರ್ಥ ಸಂಪದ', 'ಕೆಲವು ಕನ್ನಡ ನಿಘಂಟುಗಳು: ಸಮಸ್ಯೆಗಳು, ಪರಿಹಾರಗಳು', 'ಸಂಶೋಧನ ಸಂಭಾವನೆ', 'ಸಂಗೀತಶಾಸ್ತ್ರಗ್ರಂಥಚಂದ್ರಿಕೆ' ಇವರ ಪ್ರಕಟಿತ ಗ್ರಂಥಗಳು. 2016ರಲ್ಲಿ 'ಅರಳು ಪ್ರಶಸ್ತಿ'ಗೂ ಇವರು ಭಾಜನರಾಗಿದ್ದಾರೆ. ಹಲವು ಪತ್ರಿಕೆಗಳಲ್ಲಿ ನೂರಾರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಅವರ ಜೊತೆಗೆ 'ಮಯೂರ'ಕ್ಕಾಗಿ ನಡೆಸಿದ ಮಾತುಕತೆ ಇಲ್ಲಿದೆ.